ಶ್ರೀ ಎಲ್. ರಾಮಚಂದ್ರ ರಾವ್.—ದಕ್ಷಿಣ ಕನ್ನಡದ ಎಲ್ಲ ಎಂ.ಎಲ್.ಎ.ಗಳೂ ಒಂದೇ ಅಭಿಪ್ರಾಯದಲ್ಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಈ ವಿಷಯ ಸಂಬಂಧ ಪಡುತ್ತದೆ. ಎಂಬ ಆಧಾರದಲ್ಲಿ ಬಂದಿದೆ.

MR. DEPUTY SPEAKER.—You please go through it. It covers the entire State, not a particular district or a particular taluk.

ಶ್ರೀ ಎಚ್. ಗಂಗಾಧರನ್.—ಇದರಲ್ಲಿರುವುದು ಬಹಳ ಸರಳವಾದ ಅಂಶ. ಫ್ರಾಗ್‌ಮೆಂಟೇಷನ್ ಆಕ್ಟಿನಲ್ಲಿ ಏನಿದೆ ಎಂದರೆ contiguous ownerಗೆ ಚಿಕ್ಕ ಹಿಡುವಳಿಯನ್ನು ಪಕ್ಕದಲ್ಲಿರತಕ್ಕ ಜಮೀನಿನಲ್ಲಿ ಕೊಡಬೇಕು ಎಂದು ಕಾನೂನಿದೆ. ಈ ಕಾನೂನಿನಲ್ಲಿ ಏನಿದೆ ಎಂದರೆ. ಒಂದು ವೇಳೆ ಪಕ್ಕದವರಿಗೆ ಕೊಡುವುದಕ್ಕೆ ಆಗದೇ ಹೋದರೆ ಏತಕ್ಕಾಗುವುದಿಲ್ಲ ಎಂಬ ಬಗ್ಗೆ ಪ್ರಮಾಣಪತ್ರ ಹಾಜರುಪಡಿಸಿ ಪರ್ಮಿಷನ್ ತೆಗೆದುಕೊಂಡು ಬೇರೆಯವರಿಗೆ ಮಾರಬಹುದು ಎಂದು ಇದೆ.

MR. DEPUTY SPEAKER.—There was a cumbersome procedure. A petition will have to be filed before the Tahsildar and a notice will have to be given to the contiguous owner, then an enquiry should be conducted and then an order has to be passed. Now, the question of passing an order by the Tahsildar does not arise at all. In this case it is simplified.

ಶ್ರೀ ಎಚ್. ಗಂಗಾಧರನ್.—ಅದನ್ನು ಸಿಂಪ್ಲಿಫೈ ಮಾಡಿದ್ದಾರೆ ಅಷ್ಟೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದು ಯಾವುದೆಂದರೆ ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಜಮೀನಿನಲ್ಲಿ ಕನ್‌ವರ್ಷನ್ ತೆಗೆದುಕೊಳ್ಳದೇ ಮನೆಯನ್ನು ಕಟ್ಟಿಕೊಳ್ಳಬಹುದು ಎಂದಿತ್ತು; ಆಗ ಖರ್ಗೆ ಅವರು ಹೇಳುವುದನ್ನು ಒಪ್ಪಿಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇ ಅನುಕೂಲವಾಗುತ್ತದೆಂದು ಹೇಳಿದ್ದನ್ನು ನಾನು ಹೇಳಿದ್ದೇನೆ.

ಉಪಾಧ್ಯಕ್ಷರು.— ಈ ವಂಸೂದೆಗೆ ಎಲ್ಲರ ಒಪ್ಪಿಗೆ ಇದೆ ಎಂದು ಭಾವಿಸುತ್ತೇನೆ. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

ಕರ್ನಾಟಕ ರಾಜ್ಯದ ಜಮೀನಗಳನ್ನು ಭಾಗ ಮಾಡುವುದನ್ನು ತಡೆಗಟ್ಟುವುದಂ ಹಾಗೂ ಹಿಡುವಳಿ ಜಮೀನನ್ನು ಒಟ್ಟಿಗೂಡಿಸುವ (ತಿದ್ದುಪಡಿ) ವಿಧೇಯಂಕ ೧೯೮೩

ಸಭೆಯು ಪರಿಶೀಲಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ ೨ ರಿಂದ ೫ ಖಂಡಗಳು

ಉಪಾಧ್ಯಕ್ಷರು.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, ೨ ರಿಂದ ೫ನೇ ಖಂಡಗಳು ವಿಧೇಯಕದ ಅಂಗಗಳು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೨ ರಿಂದ ೫ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಮೊದಲನೆಯ ಖಂಡ ಹೆಸರು ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. (ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು,

ಅನುಮೋದನಾ ಪ್ರಸ್ತಾವ,

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಪ್ರಸ್ತಾವನ್ನು ಮಂಡಿಸಬಹುದು.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೆ, ಈ ಕೆಳಗೆ ಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ. ಕರ್ನಾಟಕ ರಾಜ್ಯದ ಜಮೀನುಗಳನ್ನು ಭಾಗ ಮಾಡುವುದನ್ನು ತಡೆಗಟ್ಟುವುದು ಹಾಗೂ ಹಿಡುವಳಿ ಜಮೀನನ್ನು ಒಟ್ಟು ಗೂಡಿಸುವ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ ಕರ್ನಾಟಕ ರಾಜ್ಯದ ಜಮೀನುಗಳನ್ನು ಭಾಗ ಮಾಡುವುದನ್ನು ತಡೆಗಟ್ಟುವುದು ಹಾಗೂ ಹಿಡುವಳಿ ಜಮೀನನ್ನು ಒಟ್ಟುಗೂಡಿಸುವ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟ ವಿಧೇಯಕ ಅನುಮೋದಿಸಲ್ಪಟ್ಟಿತು

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೩.

ಪರಿಶೀಲನಾ ಪ್ರಸ್ತಾವ

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕರ್ನಾಟಕದಲ್ಲಿ ಪುಂಜ ಲ್ಯಾಂಡ್ ಎಂದು ಹೇಳಿ ಕರಾಬ್ ಜಮೀನಿದ್ದು ಅಲ್ಲಿ ಹುಲ್ಲೂ ಸಹ ಬೆಳೆಯದಿರಲಿಲ್ಲ. ಅಂಥ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಬೇಕಾದರೆ ಡೆಪ್ಯುಟಿ ಕಮಿಷನರ್ ಅವರ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು. ಅದರಿಂದ ಬಹಳ ತೊಂದರೆಯಾಗುತ್ತಿತ್ತು. ಮತ್ತು ಪರ್ಮಿಷನ್ ಇಲ್ಲದೆ ಅನೇಕರು ಮನೆಗಳನ್ನು ಕಟ್ಟಿದ್ದಾರೆ. ಅವುಗಳನ್ನು ರೆಗ್ಯುಲರೈಸ್ ಮಾಡದೇಕೆಂದು ಶಾಸಕರು ಮಂತ್ರಿ ಸಾರ್ವಜನಿಕರಿಂದ ಮನವಿಗಳು ಬಂದಿದ್ದವು. ಸಹಜವಾದ ರೀತಿಯ ಪುಂಜ ಲ್ಯಾಂಡಿನಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಸುಲಭ ಮಾಡ ಬೇಕೆಂಬ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದ್ದು ಇದನ್ನು ಸಭೆ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್, ಗಂಗಾಧರನ್.—ಬಾಗಾಯಿತು ಜಮೀನನ್ನೂ ಸೇರಿಸಬೇಕಾಗಿತ್ತು. ಒಂದು ಎಕರೆ ತೋಟ ಇಟ್ಟುಕೊಂಡಿರುವವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ.

ಉಪಾಧ್ಯಕ್ಷರು.—ಈಗ ಪರಿಶೀಲನಾ ಪ್ರಸ್ತಾವವನ್ನು ಸಭೆಯ ಮುಂದಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.—

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೩.

ಸಭೆಯು ಪರಿಶೀಲಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ

ಉಪಾಧ್ಯಕ್ಷರು.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

೨ ಮತ್ತು ೩ನೇ ಖಂಡಗಳು